-368-

5050



ವಿಷಯ: ನೇತ್ರಾವತಿ ತಿರುವು ಯೋಜನೆಯ ಸರ್ವೆ ಮತ್ತು ಯೋಜನಾ ವರದಿಯ ತಯಾರಿಕೆಗೆ ರೂ.2.00 ಕೋಟಿಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ ಬಿಡುಗಡೆ ಮಾಡುವ ಬಗ್ಗೆ.

++ ++ ++

ಪ್ರಸ್ತಾವನೆ:-

ಕರ್ನಾಟಕ ರಾಜ್ಯದಲ್ಲಿ ಲಭ್ಯವಿರುವ ನೇತ್ರಾವತಿ ನೀರನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ...ಎಸ್.ಆರ್... ಸಂಸ್ಥಾನದಲ್ಲಿ, ನೇತ್ರಾವತಿ ತಿರುವು ಯೋಜನೆಯ ಸರ್ವೆ ಮತ್ತು ತನಿಖಾ ಕಾರ್ಯವನ್ನು ಕೈಗೊಳ್ಳಲು ಪಡೆವಲಿಗೆ ರೂ.12.115 ಕೋಟಿಗಳ ಅಂದಾಜನ್ನು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು, ಇವರಿಂದ ತಯಾರಿಸಲಾಗಿತ್ತು. ಕೇಂದ್ರ ಸ್ವಾಮ್ಯ ಸಂಸ್ಥೆಯಾದ ಎನ್.ಆರ್.ಎಸ್.ಎ., ಹೈದರಾಬಾದ್. ಇವರ ಸಹಯೋಗದೊಂದಿಗೆ ಸದರಿ ಸರ್ವೆ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಿರುವುದರಿಂದ, ಈ ಸಂಬಂಧ ದಿನಾಂಕ:31-03-2003 ರಂದು ರೂ.57.74 ಲಕ್ಷಗಳನ್ನು ಈಗಾಗಲೇ ಮೆ: ಎನ್.ಆರ್.ಎಸ್.ಎ. ಹೈದರಾಬಾದ್, ಇವರಿಗೆ ಪಾವತಿಸಲಾಗಿದ್ದು, ಒಡಂಬಡಿಕೆ ಮಾಡಿಕೊಂಡು ಉಳಿಕೆ ಮೊತ್ತವನ್ನು ಕಾಲ ಕಾಲಕ್ಕೆ ಪಾವತಿಸಬೇಕಿರುತ್ತದೆ.

2. ಮೆ: ಎನ್.ಆರ್.ಎಸ್.ಎ., ಹೈದರಾಬಾದ್, ಸಂಸ್ಥೆಯು ಏರ್‌ಬೋರ್ನ್ ಲೇಸರ್ ಟೆರೇನ್ ಮ್ಯಾಪಿಂಗ್ ಮಾಡುವಾಗ ವಿಮಾನವನ್ನು ನೇರವಾಗಿ ಹಾರಿಸಿ ಸರ್ವೆ ಮಾಡಬೇಕಾದ ಪ್ರದೇಶಗಳಲ್ಲಿ ನೇರ ಪಥದಲ್ಲಿ ಚಲಿಸಿ ಮಾಪನ ಮಾಡಬೇಕಿರುವ ಕಾರಣ, ಹಿಂದಿನ 4239 ಚ.ಕಿ.ಮೀ. ನಿಂದ 5900 ಚ.ಕಿ.ಮೀ.ಗೆ ಹೆಚ್ಚಾಗುವುದರಿಂದ ಅಂದಾಜು ವೆಚ್ಚವು ರೂ.15.50 ಕೋಟಿಗಳಾಗುತ್ತವೆಂದು ಪ್ರಧಾನ ಇಂಜನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಮುಂದುವರೆದಂತೆ ಮೆ: ಎನ್.ಆರ್.ಎಸ್.ಎ., ಹೈದರಾಬಾದ್. ಸಂಸ್ಥೆಗೆ ರೂ.2.00 ಕೋಟಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಬಿಡುಗಡೆಗೊಳಿಸುವ ಕುರಿತು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಜಸಂಇ 104 ವಿಬ್ಯಾಇ 2003, ಬೆಂಗಳೂರು, ದಿನಾಂಕ:02-09-2003**

ನೇತ್ರಾವತಿ ತಿರುವು ಯೋಜನೆಯ ಸರ್ವೆ ಮತ್ತು ಯೋಜನಾ ವರದಿಯ ತಯಾರಿಕೆಗೆ ರೂ.2.00 ಕೋಟಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಬೃಹತ್ ನೀರಾವರಿ ತನಿಖಾ ವಿಭಾಗ, ಮೈಸೂರು, ಇವರಿಗೆ ಈ ಕೂಡಲೇ ಬಿಡುಗಡೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(signature) 2/9

(ಎಸ್.ಶ್ರೀಧರ್)
ಸರ್ಕಾರದ ಅಧೀನ ಕಾರ್ಯದರ್ಶಿ (ವಿ.ಬ್ಯಾ.ಯೋ),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಪ್ರಧಾನ ಇಂಜನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು
5. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ (ಸಂಪುಟ ವ್ಯವಹಾರಗಳು), ವಿಧಾನ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕವಚ / ಹೆಚ್ಚುವರಿ ಪ್ರತಿಗಳು.

VI

3/9

SE, P&I

ಕಾರ್ಯಪಾಲಕ ಇಂಜನಿಯರವರ ಕಛೇರಿ,
ನಂ. 1, ನೀರಾವರಿ ತನಿಖಾ ವಿಭಾಗ,
ಕಾವೇರಿ ಭವನ ಸಂಕೀರ್ಣ,
ಗೋಕುಲಂ 4ನೇ ಹಂತ, ಮೈಸೂರು-20

5052

**<u>ಕರ್ನಾಟಕ ಸರ್ಕಾರ</u>**

**( ಜಲ ಸಂಪನ್ಮೂಲ ಇಲಾಖೆ )**

<u>ಕ್ರಮಾಂಕ :ನಂ : 1 :ನೀತವಿ :ಮೈ :ಲೆಶಾ :2003-2004</u> : 2170-72 22 SEP 2003

ಇವರಿಗೆ :-

ಮಹಾ ವ್ಯವಸ್ಥಾಪಕರು,
(ಹಣಕಾಸು),
ಕರ್ನಾಟಕ ನೀರಾವರಿ ನಿಗಮ ನಿಯಮಿತ,
4ನೇ ಮಹಡಿ, ಕಾಫಿ ಬೋರ್ಡ್ ಕಟ್ಟಡ,
ನಂ :1, ಡಾ : ಅಂಬೇಡ್ಕರ್ ಬೀದಿ
<u>ಬೆಂಗಳೂರು - 560 001.</u>

ಮಾನ್ಯರೆ,

ವಿಷಯ : ನೇತ್ರಾವತಿ ತಿರುವು ಯೋಜನೆಯ ಸರ್ವೆ ಮತ್ತು ಯೋಜನಾ ವರದಿ ತಯಾರಿಕೆಗೆ 2.00 ಕೋಟಿ ರೂಪಾಯಿಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1) ಸರ್ಕಾರಿ ಆದೇಶ ಸಂಖ್ಯೆ :ಜಸಂಇ :104 :ವಿಬಾಯೋಇ :2003, ಬೆಂಗಳೂರು, ದಿನಾಂಕ : 02-09-2003.

2) ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು, ರವರ ಪತ್ರ ಸಂಖ್ಯೆ :ಜಸಅ :ಯೋತ :ತಾಸ-4 : ಸಇಂ-2 :ನೇತ್ರಾವತಿ :2003-04 :ದಿನಾಂಕ : 6-9-2003.

3) ಅಧೀಕ್ಷಕ ಇಂಜಿನಿಯರ್, ನೀರಾವರಿ ತನಿಖಾ ವೃತ್ತ, ಮೈಸೂರು ರವರ ಪತ್ರ ಸಂಖ್ಯೆ :ನೀತವಿ :ಮೈ :ಪಿಆರ್‌ಜಿ-2 :ಇನಆರ್‌ಇಸಎ :2003-04 ದಿನಾಂಕ : 17-9-2003.

ಂಂ

ನೇತ್ರಾವತಿ ತಿರುವು ಯೋಜನೆಯ ಸರ್ವೆ ಮತ್ತು ಯೋಜನಾ ವರದಿಯ ತಯಾರಿಕೆಗೆ ಸಂಬಂಧಿಸಿದಂತೆ ಕೇಂದ್ರ ಸ್ವಾಮ್ಯ ಸಂಸ್ಥೆಯಾದ ಇನ್.ಆರ್.ಇಸ್.ಎ. ಹೈದರಾಬಾದ್, ರವರಿಗೆ ಒಡಂಬಡಿಕೆ ಪ್ರಕಾರ ಸರ್ವೆ ಕೆಲಸವನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಪಾವತಿಸಲು ಸಧ್ಯಕ್ಕೆ ರೂ.2.00 ಕೋಟಿಗಳ ಹಣ ಭರವಸೆ ಪತ್ರದ ಅಗತ್ಯವಿರುತ್ತದೆ. ಮೇಲ್ಕಂಡ ಉದ್ದೇಶಕ್ಕಾಗಿ ರೂ.2.00 ಕೋಟಿಗಳನ್ನು ಬಿಡುಗಡೆಗೊಳಿಸುವಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರಿಗೆ ಸರ್ಕಾರಿ ಆದೇಶ ಸಂಖ್ಯೆ : ಜಸಂಇ :104 :ವಿಬಾಯೋಇ :2003 : ದಿನಾಂಕ : 02-09-2003 ರಲ್ಲಿ ಆದೇಶಿಸಲಾಗಿದ್ದು ಸದರಿ ಸರ್ಕಾರಿ ಆದೇಶದ ಪ್ರತಿಯನ್ನು ಈ ಪತ್ರದೊಂದಿಗೆ ಸಲ್ಲಿಸಲಾಗಿದೆ ಮತ್ತು ಸರ್ಕಾರಿ ಆದೇಶದ ರೀತ್ಯಾ ರೂ.2.00 ಕೋಟಿಗಳನ್ನು ಈ ವಿಭಾಗಕ್ಕೆ ಜರೂರು ಬಿಡುಗಡೆಗೊಳಿಸುವಂತೆ ಕೋರಲಾಗಿದೆ.

ಅಡಕ : ಸರ್ಕಾರಿ ಆದೇಶ ದಿನಾಂಕ :
2-9-2003ರ ಪ್ರತಿ.

ತಮ್ಮ ವಿಶ್ವಾಸಿ,

R.R. Srinivasalaya

ಕಾರ್ಯಪಾಲಕ ಇಂಜಿನಿಯರ್,
ನಂ :1, ನೀರಾವರಿ ತನಿಖಾ ವಿಭಾಗ,
ಮೈಸೂರು.

ಎಂಸಿನ :